ಮಂಗಳೂರು ಆಳಿವೆ ಬಾಗಿಲಿನಲ್ಲಿ ಬ್ರೇಕ್ ವಾಟರ್ ಕೆಲಸದ ಬಗ್ಗೆ ಟೆಂಡರ್.

೧೮೨೨ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮಂಗಳೂರು ಆಳಿವೆ ಬಾಗಿಲಿನಲ್ಲಿ ಬ್ರೇಕ್ ವಾಟರ್ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆಯೇ ?

(ಆ) ಈ ಕೆಲಸ ಇನ್ನೂ ಪ್ರಾರಂಭಿಸದೇ ಇರುವುದರಿಂದ ಸಮುದ್ರ ಕೊರೆತ ಉಂಟಾಗಿ ಉಳ್ಳಾಲದ ಕರಾವಳಿಯಲ್ಲಿ ಭಾರೀ ಹಾನಿಯಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಈ ಬ್ರೇಕ್ ವಾಟರ್ ಕೆಲಸ ಪ್ರಾರಂಭಿಸಿ ಪರಿಪೂರ್ಣಗೊಳಿಸಲಾಗುವುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ಹೌದು. ಗುತ್ತಿಗೆಯನ್ನು ತೀರ್ಮಾನಿಸಲಾಗಿದೆ.

(ಆ) ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಕಾಮಗಾರಿಯನ್ನು ಗುತ್ತಿಗೆದಾರರಿಗೆ ಪಹಿಸಲಾಗಿದ್ದು, ಶೀಘ್ರದಲ್ಲೇ ಪ್ರಾರಂಭ ಮಾಡಲಾಗುತ್ತದೆ.

ಮಂಗಳೂರು ಆಳಿವೆ ಬಾಗಿಲಲ್ಲಿ ಹೂಳೆತ್ತಲಾಗುವುದು

೧೮೧ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಮಂಗಳೂರು ಆಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇರುವುದರಿಂದ ೧೯೮೮-೮೯, ೧೯೮೯-೯೦ನೇ ಸೆಪ್ಟೆಂಬರ್ ಅಂತ್ಯದವರೆಗೆ ಮುಳುಗಿ ಹೋದ ಬೋಟುಗಳ ಸಂಖ್ಯೆ ಎಷ್ಟು ?

(ಆ) ಆ ರೀತಿಯ ಹಾನಿಯಿಂದ ಉಂಟಾದ ನಷ್ಟವೆಷ್ಟು ?

(ಇ) ನಷ್ಟ ಹೊಂದಿದವರಿಗೆ ಸರ್ಕಾರ ಪರಿಹಾರ ಕೊಟ್ಟಿದೆಯೇ ? ಕೊಟ್ಟಿದ್ದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ ?

(ಈ) ಸಂಪೂರ್ಣ ಹೂಳೆತ್ತುವ ಕೆಲಸ ಯಾವಾಗ ಪರಿಪೂರ್ಣವಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ೧೯೮೮-೮೯ನೇ ವರ್ಷದಲ್ಲಿ ೧೪ ಬೋಟುಗಳು ಮತ್ತು ೧೯೮೯-೯೦ನೇ ಸೆಪ್ಟೆಂಬರ್ ಅಂತ್ಯದವರೆಗೆ ಎರಡು ಬೋಟುಗಳು ಮುಳುಗಿರುತ್ತವೆ.

(ಆ) ೧೯೮೮-೮೯ನೇ ಸಾಲಿನಲ್ಲಿ ರೂ. ೧೩.೨೦ ಲಕ್ಷ ಮತ್ತು ೧೯೮೯-೯೦ನೇ ಸಾಲಿನಲ್ಲಿ ಸೆಪ್ಟೆಂಬರ್ ತನಕ ರೂ. ೧೩.೦೦ ಲಕ್ಷ ನಷ್ಟ ಉಂಟಾಗಿರುತ್ತದೆ.

(ಇ) ದೋಣಿಗಳ ಮಾಲೀಕರಿಗೆ ಸರ್ಕಾರದಿಂದ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ.

(ಈ) ಆದಷ್ಟು ಶೀಘ್ರವಾಗಿ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಂಡು ಪರಿಪೂರ್ಣಗೊಳಿಸಲಾಗುವುದು.

ಮಂಗಳೂರಿನ ಕುಡಿಯುವ ನೀರಿನ ಪೂರೈಕೆಗೆ ತುಂಬೆಯಲ್ಲಿ ವೆಂಟೆಡ್ ಡ್ಯಾಂ

೧೮೩ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

(ಅ) ಮಂಗಳೂರಿನ ಕುಡಿಯುವ ನೀರಿನ ಪೂರೈಕೆಗೆ ತುಂಬೆಯಲ್ಲಿ ವೆಂಟೆಡ್ ಡ್ಯಾಂ ಕಟ್ಟುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ ?